'ಅದ ನಿನಗ ಹ್ಯಂಗ್ ಗೊತ್ತಾತು?' ಅಂತ ಸರಸ್ವತಿ ಹಿಡ್ತು ಬಿಡ್ತು ಮಾಡುತ್ತ ಕೇಳಿದ್ದಳು. 'ಇಲ್ಲ ಮಾರಾಯ್ತೀ, ನಮ್ಮ ಬ್ಯಾಂಕಿನವರೆಲ್ಲ ನಿಮ್ ಹುಬ್ಬಳ್ಳಿ ಮಂದಿ ಗ್ರೂಪ್ಪಿನ್ಯಾಗ ಅದಾರಂತ, ಅವರ ಹೇಳ್ತಿರತಾರ, ನಿಮ್ ಮನೀಯವ್ರು ಈವತ್ತು ಹೀಂಗ ಬರದಾರ, ನಿನ್ನೆ ಹಂಗ ಬರದಿದ್ರು ಅಂತ' ಅನ್ನುತ್ತ ಶಂಕರ ಅಲ್ಲೇ ಜಾರಿಕೊಂಡಿದ್ದ.

ಆದರೆ, ಇತ್ತೀಚೆಗೆ ಹೆಚ್ಚಾಗಿ ಕಾಣುತ್ತಿದ್ದ ಸತ್ಯ ಹರಿಶ್ಚಂದ್ರ ಎಂಬ ಗೌಪ್ಯ ನಾಮದಿಂದ ಅಕೌಂಟ್ ಹೊಂದಿದ್ದ ವ್ಯಕ್ತಿಯೊಬ್ಬ ತೀರಾ ಪ್ರಾಮಾಣಿಕವಾಗಿ ಕಮೆಂಟು ಮಾಡುತ್ತಿದ್ದುದನ್ನು ಸರಸ್ವತಿ ಮೊದಮೊದಲು ಸುಮ್ಮನೇ ಓದುತ್ತಿದ್ದಳು. ಒಮ್ಮೆ ಶಕುಂತಲಾ ಪೈ ಎನ್ನುವ ಸ್ನೇಹಿತೆಯೊಬ್ಬಳು 'ಊಟವಾದ ನಂತರ ಅರ್ಧ ಗಂಟೆ ಬಿಟ್ಟು ಒಂದು ಲೋಟ ಬೆಚ್ಚಗಿನ ನೀರು ಕುಡಿದರೆ, ಜೀರ್ಣ ಶಕ್ತಿ ಹೆಚ್ಚುತ್ತದೆ' ಅಂತ ಅಪ್ ಡೇಟ್ ಕೊಟ್ಟಿದ್ದಳು. ಅದಕ್ಕೆ ನೂರುಗಟ್ಟಲೇ ಕಮೆಂಟುಗಳು ಆರುನೂರು ಲೈಕ್‌ಗಳು ಬಂದಿದ್ದವು. ಒಬ್ಬನ ಕಮೆಂಟು ಮಾತ್ರ 'ಊಟವಾದ ನಂತರ ಹಣ್ಣುಗಳನ್ನು ತಿಂದರೂ ಜೀರ್ಣ ಶಕ್ತಿ ಹೆಚ್ಚುತ್ತದೆ' ಅಂತ ಇತ್ತು.

ಅದರ ಕೆಳಗಡೆ ಸತ್ಯ ಹರಿಶ್ಚಂದ್ರ ಬರೆದಿದ್ದ 'ನಮ್ಮ ಹುಬ್ಬಳ್ಳಿಯ ಹದಿನೈದು ಲಕ್ಷ ಜನರಲ್ಲಿ ಎಷ್ಟು ಜನರು ಹಣ್ಣು ತಿನ್ನುವ ಸಾಮರ್ಥ್ಯ ಪಡೆದಿದ್ದಾರೆ? ಎಷ್ಟೋ ಜನರಿಗೆ ಎರಡು ಹೊತ್ತಿನ ಊಟಕ್ಕೇ ಗತಿಯಿಲ್ಲ' ಅಂದಿತ್ತು. ಆ ಕಮೆಂಟಿಗೇ ಇಪ್ಪತ್ತೆಂಟು ಜನ ಲೈಕ್ ಮಾಡಿದ್ದರು. ಅದನ್ನು ಓದಿ ಪ್ರೇರೇಪಣೆಗೊಂಡ ದಿನವೇ ಸರಸ್ವತಿ, ಆ ಸತ್ಯ ಹರಿಶ್ಚಂದ್ರನ ಸ್ನೇಹಕ್ಕಾಗಿ ತಾನೇ ಫ್ರೆಂಡ್ ರಿಕ್ವೆಸ್ಟ್ ರವಾನಿಸಿದ್ದಳು. ಅದಕ್ಕಿಂತ ಮೊದಲು 'ಯಾರೀತ ರಗಳೆ ಸತ್ಯ ಹರಿಶ್ಚಂದ್ರ? ಎಲ್ಲದಕ್ಕೂ ಉಲ್ಟಾ ವಾದ ತೆಗೆದು ಕಮೆಂಟು ಮಾಡುತ್ತಾನೆ' ಅಂತಲೇ ಕಡೆಗಣಿಸಿದ್ದಳು. ಆದರೆ, ಅವತ್ಯಾಕೋ ಈ ಹರಿಶ್ಚಂದ್ರನೆಂಬ ಅನಾಮಧೇಯ ಹೇಳುವುದೆಲ್ಲ ಸತ್ಯವಾದುದು, ಸರಿಯಾದುದು ಅನಿಸತೊಡಗಿದ್ದರಿಂದ ತಾನೇ ಅವನೆಡೆಗೆ ಸ್ನೇಹ ಹಸ್ತ ಚಾಚುವ ಮನಸ್ಸು ಮಾಡಿದ್ದಳು. ಏಳೆಂಟು ದಿನಗಳವರೆಗೆ ಕಾಯಿಸಿ ನಂತರ ಆತ ಇವಳ ರಿಕ್ವೆಸ್ಟ್‌ನ್ನು ಒಪ್ಪಿ ಖಚಿತ ಮಾಡಿದ್ದ. ಅದನ್ನು ಕಂಡವಳೇ ಸರಸ್ವತಿ ಅಕ್ಷರಶಃ ಕುಣಿದಾಡಿಯೇ ಬಿಟ್ಟಿದ್ದಳು. ಸರಸ್ವತಿ ಈಗ ಅವನ ಅಷ್ಟು ದೊಡ್ಡ ಫ್ಯಾನ್ ಆಗಿ ಮಾರ್ಪಾಡಾಗಿದ್ದಳು. ಅದನ್ನು ಅಂದೇ ಸರಸ್ವತಿ ಶಂಕರನ ಬಳಿ ಹೇಳಿದ್ದಳು ಕೂಡ. 'ಹೌದೇ? ಆಲ್ ದಿ ಬೆಸ್ಟ್' ಅನ್ನುತ್ತ ಆತ ಸುಮ್ಮನೆ ಮುಗುಳ್ನಕ್ಕಿದ್ದ.

★★★

ಹೀಗೆ ಫೇಸ್‌ಬುಕ್ ಲೋಕದ ಹುಬ್ಬಳ್ಳಿ ಮಂದಿ ಗ್ರೂಪ್ಪಿನ ಕಿಂಗ್ ಆಗಿ ಮೆರೆಯುತ್ತಿದ್ದ ಸತ್ಯ ಹರಿಶ್ಚಂದ್ರ ಒಮ್ಮಿಂದೊಮ್ಮೆಲೇ ಈಗ 'ನಾನೂ ನಿಮ್ಮ ಅಭಿಮಾನಿಯೇ' ಅನ್ನುತ್ತ ಮನೆಯ ವಿಳಾಸ ಪಡೆದು, ನನ್ನನ್ನು ನೋಡಲು ಬರುತ್ತಿದ್ದಾನೆಂದರೆ, ಎಂಥದೇ ಸಂದಿಗ್ಧದ ಮಧ್ಯೆಯೂ ಎಲ್ಲ ತಾರತಮ್ಯಗಳೂ ಸಂಶಯಗಳೂ ಗೌಣವೆನಿಸಿ ಸರಸ್ವತಿಯ ಸಂತೋಷಕ್ಕೆ ಪಾರವೇ ಇರಲಿಲ್ಲ.

ಇತ್ತ ಶಂಕರ ಬ್ಯಾಂಕು ಬಿಟ್ಟು ಮನೆಗೆ ಬಂದು ಅರ್ಧ ಗಂಟೆಯಾದರೂ ಅತ್ತ ಸತ್ಯ ಹರಿಶ್ಚಂದ್ರನ ಸುಳಿವೇ ಇಲ್ಲ. ಸರಸ್ವತಿ ಕಾದಳು, ಕಾದಳು, ಕಾಯುತ್ತಲೇ ಇದ್ದಳು. 'ಏನು ಮಾಡಿದ್ದೀ ತಿನ್ನಾಕ? ನನಗ ಕೊಟ್ಟಿಡು, ಆಮ್ಯಾಗ ತಣ್ಣಗಾಕ್ಕೇತಿ' ಅಂತ ಕಿಚಾಯಿಸುವ ದನಿಯಲ್ಲಿ ತಣ್ಣಗೆ ಅಂದ ಶಂಕರ. 'ಸ್ವಲ್ಪ ಹೊತ್ತು ನೋಡೂಣು, ಅದೇ ಆ ಹರಿಶ್ಚಂದ್ರ ಬಂದ್ ಬಿಟ್ರ ಅವನ ಜೋಡೀನ ತಿಂದ್ರಾತು' ಅಂದಿದ್ದಳು ಹುಸಿಕೋಪ ತೋರಿಸುತ್ತ ಸರಸ್ವತಿ. 'ಅಂವ ಏನ್ ಬರೂವಂಗ ಕಾಣಂಗಿಲ್ಲ, ಒಗ್ಗರಣಿ ಘಮಾ ಘಮಾ ಅನಲಿಕ್ಕ ಹತ್ತದ, ನನಗ ಕೊಡು' ಅಂತ ಶಂಕರ ಮೀಸೆಯಲ್ಲೇ ಸಣ್ಣಗೆ ನಗುತ್ತ ಹಟಹಿಡಿದ.